# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 901 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11–03–2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮೈಸೂರು – ಕುಶಾಲ ನಗರ ನಡುವೆ ನಿರ್ಮಾಣವಾಗುತ್ತಿರುವ ರಾಷ್ಟ್ರೀಯ ಹೆದ್ದಾರಿ 275 ರಂಗನತಿಟ್ಟು ಪಕ್ಷಿಧಾಮದ ಅತ್ಯಂತ ಸಮೀಪದಲ್ಲಿ ಹಾದು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಮೈಸೂರು–ಕುಶಾಲ ನಗರ ನಡುವೆ ನಿರ್ಮಾಣ ವಾಗುತ್ತಿರುವ ರಾಷ್ಟ್ರೀಯ ಹೆದ್ದಾರಿ–275 ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ವ್ಯಾಪ್ತಿಗೆ ಒಳಪಡುತ್ತದೆ.<br><br>ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುವಂತೆ, ಮೈಸೂರು – ಕುಶಾಲ ನಗರ ನಡುವೆ ನಿರ್ಮಾಣವಾಗುತ್ತಿರುವ ರಾಷ್ಟ್ರೀಯ ಹೆದ್ದಾರಿ–275ರ ಪ್ರಸ್ತಾವಿತ ಮಾರ್ಗವು ರಂಗನತಿಟ್ಟು ಪಕ್ಷಿಧಾಮದ ಕೇಂದ್ರ ಪ್ರದೇಶದಿಂದ ದೂರದಲ್ಲಿದೆ ಮತ್ತು ಈ ಮಾರ್ಗವು ಕೇವಲ 650 ಮೀಟರ್ ಭಾಗ ಮಾತ್ರ ರಂಗನತಿಟ್ಟು ಪಕ್ಷಿಧಾಮದ ಪರಿಸರ ಸೂಕ್ಷ್ಮ ವಲಯದೊಳಗೆ ಇದೆ. |
| ಆ | ಸದರಿ ಹೆದ್ದಾರಿ ನಿರ್ಮಾಣದಿಂದ ಪಕ್ಷಿದಾಮದ ಪರಿಸರ ಸೂಕ್ಷ್ಮ ವಲಯದ (Eco – Sensitive Zone) ಮೇಲೆ ಉಂಟಾಗುವ ಪರಿಣಾಮಗಳ ಕುರಿತು ಪರಿಸರ ಇಲಾಖೆಯಿಂದ ವರದಿ ಪಡೆಯಲಾಗಿದೆಯೇ | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುವಂತೆ, MoEF&CC ಮಾರ್ಗಸೂಚಿಗಳ ಪ್ರಕಾರ ಪರಿಸರ ಅನುಮತಿ (Environmental Clearance) ಯನ್ನು ಪಡೆಯಲಾಗಿದೆ. ಅಲ್ಲದೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯಿಂದ (National Board of Wildlife) ವನ್ಯಜೀವಿ ಅನುಮತಿಯನ್ನು ಸಹ ನೀಡಲಾಗಿದೆ. |
| ಇ | ವನ್ಯಜೀವಿನ ಮತ್ತು ಅಪರೂಪದ ಪಕ್ಷಿಗಳ ಸುರಕ್ಷತೆಗಾಗಿ ಯೋಜನೆಯಲ್ಲಿ ಯಾವ ಬದಲಾವಣೆಗಳನ್ನು ಮಾಡಲಾಗಿದೆ: ಪರಿಸರ ತಜ್ಞರ ಸಲಹೆಯಂತೆ ಪರ್ಯಾಯ ಮಾರ್ಗದ ಬಗ್ಗೆ ಸರ್ಕಾರ ಚಿಂತಿಸಿದೆಯೇ? | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುವಂತೆ, ವನ್ಯಜೀವಿ ಶಮನ ಯೋಜನೆಯಡಿ (Wildlife Mitigation Plan) ಅರಣ್ಯ ಇಲಾಖೆಯು ನೀಡಿದ ಶಿಫಾರಸ್ಸುಗಳ ಪ್ರಕಾರ ಶಮನ ಕ್ರಮಗಳಿಗಾಗಿ NHAIಯು ರೂ.11.14 ಕೋಟಿ ಮೊತ್ತವನ್ನು ಠೇವಣಿ ಇಟ್ಟಿದೆ. ಹಾಗೆಯೇ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ ಶಿಫಾರಸ್ಸುಗಳನ್ನು NHAI ಅನುಸರಿಸುತ್ತದೆ. |

ಸಂಖ್ಯೆ: ಲೋಇ 160 ಸಿಎನ್‌ಹೆಚ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು